ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಶ್ರೀರಂಗಪಟ್ಟಣ
ಸಿಸಿಃ ನಂಃ **526/2017**

ಪಿ.ಡಬ್ಲ್ಯೂಃ **05**

ಸಿ.ಡಬ್ಲ್ಯೂಃ **05**

| | |
|---|---|
| ಸಾಕ್ಷಿಯ ಹೆಸರು | ಮರಿಸ್ವಾಮಿ ಕೆ.ಎಂ |
| ತಂದೆ/ಗಂಡನ ಹೆಸರು | ಮರಿಸ್ವಾಮಿ |
| ವಯಸ್ಸು | 40 ವರ್ಷ |
| ಉದ್ಯೋಗ | ಸಹಾಯಕ ಅರಣ್ಯ ಸರಂಕ್ಷಣಾಧಿಕಾರಿ, ಕಾವೇರಿ ವನ್ಯಜೀವಿ ಉಪವಿಭಾಗ, ಹನೂರು |
| ವಿಳಾಸ | ಹನೂರು |

ಸಾಕ್ಷಿಗೆ ದಿನಾಂಕ **21.11.2025** ರಂದು ಪ್ರಮಾಣವಚನ ನೀಡಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಸ ಸ ಅ ರವರಿಂದಃ

ಚಾ ಸಾ **1** ರಿಂದ **4, 6** ರಿಂದ **9** ರವರು ಗೊತ್ತು.

ನಾನು ದಿ.**13.01.2014** ರಿಂದ **18.11.2016** ರವರೆಗೆ ಶ್ರೀರಂಗಪಟ್ಟಣ ವಲಯ ಅರಣ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ.**12.03.2015** ರಂದು ಚಾ ಸಾ **2** ರವರು ನನಗೆ ಕರೆಮಾಡಿ ಜಕ್ಕನಹಳ್ಳಿ, ಚೆನ್ನನಕೆರೆ, ಗೌಡಹಳ್ಳಿ, ಗಣಂಗೂರು, ಕಾಳೇನಹಳ್ಳಿ, ಟಿ.ಎಂ.ಹೊಸೂರು ಗ್ರಾಮಗಳಲ್ಲಿ ಅಕ್ರಮ ಗಣಿಗಾರಿಕೆ ನಡೆಸುತ್ತಿದ್ದಾರೆ ಎಂದು ಜಂಟಿ ಕಾರ್ಯಾಚರಣೆ ನಡೆಸಲು ಆಹ್ವಾನಿಸಿದ್ದು ಆ ಮೇರೆಗೆ ನಾನು ಮತ್ತು ಚಾ ಸಾ **6** ರವರು ಚಾ ಸಾ **2** ರವರ ಕಛೇರಿಗೆ ಭೇಟಿ ನೀಡಿದ್ದು ಅಧಿಕಾರಿಗಳ ಜೊತೆ ಸ್ಥಳ ಪರಿಶೀಲನೆಗೆ ಚಾ ಸಾ **1** ರಿಂದ **4, 6** ರಿಂದ **9** ರವರ ಜೂತೆ ಜಕ್ಕನಹಳ್ಳಿ ಸರ್ವೆ ನಂ.**83/**ಬಿ-**18**-ಪಿ**3** ಸದರಿಯಲ್ಲಿ **20** ಗುಂಟೆ ಜಮೀನು ಇದ್ದು **1** ನೇ ಆರೋಪಿಗೆ ಸೇರಿದ್ದಾಗಿದ್ದು ಅಲ್ಲಿ ಸುತ್ತಿಗೆ ಮತ್ತು ಹಾರೆ ಇತ್ಯಾದಿ ಉಪಕರಣಗಳನ್ನು ಉಪಯೋಗಿಸಿ ಕಟ್ಟಣ ನಿರ್ಮಾಣ ಮಾಡಲು ಬಳಸತಕ್ಕ ಅಳತೆಯ ಕಲ್ಲುಗಳನ್ನು ಹೆಕ್ಕಿ ತೆಗೆಯುತ್ತಿದ್ದರು. ನಾವು ಹೋದ ವಾಹನಗಳನ್ನು ನೋಡಿ ಸ್ಥಳದಿಂದ ಓಡಿಹೋಗಿರುತ್ತಾರೆ. ನಾವು ಚಾ ಸಾ **2** ರವರ ಇಲಾಖಾ ವಾಹನದಲ್ಲಿ ಹೋಗಿರುತ್ತೇವೆ. ಉಳಿದವರು ಚಾ ಸಾ **1** ರವರ ಇಲಾಖಾ ವಾಹನದಲ್ಲಿ

ಬಂದಿರುತ್ತಾರೆ. ಸ್ಥಳದಲ್ಲಿ ಚಾ ಸಾ 3 ರವರು (ಕಂದಾಯ ನೀರಿಕ್ಷಕರು) ಸ್ಥಳ ಮಹಜರ್ ಕ್ರಮ ಬರೆದಿರುತ್ತಾರೆ.

ನಂತರ ಮತ್ತೊಂದು ಸರ್ವೆ ನಂ.83/ಬಿ-16 ರಲ್ಲಿ 1 ಎಕರೆ 19 ಗುಂಟೆ ಇದ್ದು ಅದು 2 ನೇ ಆರೋಪಿ ವಿಷಕಂಠೇಗೌಡ ಬಿನ್ ಜವರೇಗೌಡರವರಿಗೆ ಸೇರಿದ್ದಾಗಿರುತ್ತದೆ. ಅಲ್ಲಿ ಗಣಿಗಾರಿಕೆ ಮಾಡಿರುವ ಬಗ್ಗೆ ಚಾ ಸಾ 3 ರವರು ಮಹಜರ್ ಕ್ರಮ ಜರುಗಿಸಿರುತ್ತಾರೆ. ಸದರಿ ಸ್ಥಳದಲ್ಲಿಯೂ ಸಹ ಕಟ್ಟಡ ಕಾಮಗಾರಿಗೆ ಬಳಸಲಾಗುವ ಕಲ್ಲುಗಳನ್ನು ಹೊರತೆಗೆಯಲಾಗಿತ್ತು.

ನಂತರ ಮತ್ತೊಂದು ಸರ್ವೆ ನಂ.83/ಪೈಕಿ.ಪಿ4 ರಲ್ಲಿ 2 ಎಕರೆ 39 ಗುಂಟೆ ಜಮೀನಿದ್ದು ಸದರಿ ಜಮೀನು 3 ಮತ್ತು 4 ನೇ ಆರೋಪಿತರ ಹೆಸರಿನಲ್ಲಿ ಜಂಟಿ ಖಾತೆಯಲ್ಲಿರುತ್ತದೆ. ಸದರಿ ಸ್ಥಳದಲ್ಲಿಯೂ ಸಹ ಕಟ್ಟಡ ಕಾಮಗಾರಿಗೆ ಬಳಸಲಾಗುವ ಕಲ್ಲುಗಳನ್ನು ಹೊರತೆಗೆಯಲಾಗಿತ್ತು.

ನಂತರ ಮತ್ತೊಂದು ಸರ್ವೆ ನಂ.83/ಪಿ1.ಪಿ1 ರಲ್ಲಿ 20 ಗುಂಟೆ ಜಮೀನಿದ್ದು ಸದರಿ ಜಮೀನು 5 ನೇ ಆರೋಪಿಗೆ ಸೇರಿದ್ದು, ಸದರಿ ಸ್ಥಳದಲ್ಲಿಯೂ ಸಹ ಕಟ್ಟಡ ಕಾಮಗಾರಿಗೆ ಬಳಸಲಾಗುವ ಕಲ್ಲುಗಳನ್ನು ಹೊರತೆಗೆಯಲಾಗಿತ್ತು. ಮೇಲ್ಕಂಡ ಎಲ್ಲಾ ಸ್ವತ್ತುಗಳನ್ನು ಪರಿಶೀಲಿಸಿ ಚಾ ಸಾ 3 ರವರು ಮಹಜರ್ ಕ್ರಮ ಬರೆದಿರುತ್ತಾರೆ. ಸ್ಥಳದಲ್ಲಿದ್ದ ಗಣಿ ಮತ್ತು ಭೂವಿಜ್ಞಾನ ಇಲಾಖಾ ಅಧಿಕಾರಿಗಳು ಈ ಮೇಲ್ಕಂಡ ಸ್ವತ್ತುಗಳಲ್ಲಿ ಗಣಿಗಾರಿಕೆ ಮಾಡುವ ಸಂಬಂಧ ಯಾವುದೇ ಪರವಾನಿಗೆ ನೀಡಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಈ ಅಕ್ರಮ ಗಣಿಗಾರಿಕೆ ಸಂಬಂಧ ಚಾ ಸಾ 2 ರವರ ಮೌಖಿಕ ಸೂಚನೆ ಮೇರೆಗೆ ಚಾ ಸಾ 1 ರವರು ಈ ಬಗ್ಗೆ ದೂರು ದಾಖಲಿಸಿರುತ್ತಾರೆ. ದಿ.17.003.2015 ರಂದು ನನ್ನನ್ನು ತನಿಖಾಧಿಕಾರಿಗಳು ಠಾಣೆಗೆ ಕರಸಿದ್ದು ಈ ಘಟನೆಯ ಬಗ್ಗೆ ಹೇಳಿಕೆ ನೀಡಿರುತ್ತೇನೆ. ಸಾಕ್ಷಿ ನ್ಯಾ.ದ ಮುಂದೆ ಇರುವ 1, 2, 4 ಮತ್ತು 5 ನೇ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿಗೆ ನಿಪಿ 1 ನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ 1 ಸಿ ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ 2 ನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ 2 ಡಿ ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ 3 ನ್ನು

ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ **3** ಡಿ ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ **4** ನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ **4** ಡಿ ಎಂದು ಗುರುತಿಸಲಾಯಿತು.

<u>ಪಾಟೀಸವಾಲುಃ ಆರೋಪಿಪರ ವಕೀಲರಿಂದ</u>

ನಾನು ಆ ದಿನ ಕರ್ತವ್ಯದಲ್ಲಿದ್ದ ಬಗ್ಗೆ ತನಿಖಾಧಿಕಾರಿಗಳು ನನ್ನ ಕರ್ತವ್ಯ ದೃಡೀಕರಣ ಪತ್ರ ಮತ್ತು ಹಾಜರಾತಿಯ ದೃಡೀಕೃತ ಪ್ರತಿಯನ್ನು ಪಡೆದುಕೊಂಡಿರುವುದಿಲ್ಲ. ಜಂಟೀ ಕಾರ್ಯಾಚರಣೆಗೆ ಸಂಬಂಧಿಸಿದಂತೆ ಚಾ ಸಾ 2 ರವರು ನನ್ನನ್ನು ಆಹ್ವಾನಿಸಿದ ಬಗ್ಗೆ ಈ ದಿನ ನ್ಯಾ.ದಲ್ಲಿ ಹೊರತುಪಡಿಸಿ ಎಲ್ಲೂ ಹೇಳಿಲ್ಲ ಎಂದರೆ ಸರಿಯಲ್ಲ, ಸಾಕ್ಷಿ ತನಿಖಾಧಿಕಾರಿಗಳ ಮುಂದೆ ಹೇಳಿರುತ್ತೇನೆ. ನಾನು ತನಿಖಾಧಿಕಾರಿಗಳ ಮುಂದೆ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಚಾ ಸಾ 1 ರಿಂದ 4, 6 ರಿಂದ 9 ರವರ ಜೊತೆ ಜಂಟೀ ಕಾರ್ಯಾಚರಣೆ ಮಾಡಿರುವ ಬಗ್ಗೆ ಚರ್ಚೆ ಮಾಡಿರುವ ಬಗ್ಗೆ ನ್ಯಾ.ದ ಮುಂದೆ ಇದೇ ಮೊದಲ ಭಾರಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಸರ್ವೆ ನಂಬರ್ ಗಳಿಗೆ ಭೇಟಿ ನೀಡಿಲ್ಲ, ಮಹಜರ್ ಕ್ರಮ ಜರುಗಿಸಿಲ್ಲ ಎಂದರೆ ಸರಿಯಲ್ಲ. ನಿಪಿ 1 ರಿಂದ 4 ರಲ್ಲಿ ಎಷ್ಟು ಗಂಟೆಗೆ ಮಹಜರ್ ಕ್ರಮ ಜರುಗಿಸಿ ಎಷ್ಟು ಗಂಟೆಗೆ ಮುಕ್ತಾಯಗೊಳಿಸಿರುತ್ತೇವೆ ಎಂಬ ಬಗ್ಗೆ ನಮೂದು ಇಲ್ಲ ಎಂದರೆ ಸರಿ. ಮೇಲ್ಕಂಡ ಸಾಲ್ಕು ಸರ್ವೆ ನಂಬರ್ ಗಳಿಗೆ ಸಂಬಂಧಿಸಿದಂತೆ ಯಾವ ದಿಕ್ಕುಗಳಲ್ಲಿ ಯಾವ ಯಾವ ಸರ್ವೆ ನಂಬರ್ ಗಳಿರುತ್ತದೆ ಎಂಬ ಬಗ್ಗೆ ಚೆಕ್ಕುಬಂದಿ ನಮೂದಿಸಿರುವುದಿಲ್ಲ ಎಂದರೆ ಸರಿ. ದಾಳಿಗೆ ಹೋಗಿದ್ದೆವು ಎಂದು ಹೇಳಲಾದ ಅಧಿಕಾರಿಗಳ ಬಳಿ ಸ್ಮಾರ್ಟ್ ಪೋನ್ ಇದ್ದವು ಎಂದರೆ ಸರಿ. ಯಾವುದೇ ಅಧಿಕಾರಿಯು ತಮ್ಮ ಮೊಬೈಲ್ ಮೂಲಕ ಛಾಯಗ್ರಹಣ ಮಾಡಿರುವುದಿಲ್ಲ, ಛಾಯಗ್ರಹಣ ಮಾಡಲು ನಮಗೆ ಯಾವುದೇ ತೊಂದರೆ ಇರಲಿಲ್ಲ. ಯಾರು ಮಹಜರ್ ಬರೆದಿರುತ್ತಾರೆ ಎಂಬ ಬಗ್ಗೆ ಷರಾ ಬರೆದಿರುವುದಿಲ್ಲ ಎಂದರೆ ಸರಿ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಅಕ್ರಮ ಗಣಿಗಾರಿಕೆ ಬಗ್ಗೆ ಚಾ ಸಾ 1 ಮತ್ತು 2 ರವರ ಕಛೇರಿಯಲ್ಲಿ ಯಾವುದೇ ದೂರು ದಾಖಲಾಗಿರುವುದಿಲ್ಲ ಎಂದರೆ ಸರಿ. ಅಕ್ರಮ ಗಣಿಗಾರಿಕೆ ಬಗ್ಗೆ ದೂರು

ನೀಡಿರುವ ಬಗ್ಗೆ ಸ್ಥಳ ಪರಿಶೀಲನೆ ವೇಳೆ ಚಾ ಸಾ 1 ಮತ್ತು 2 ರವರು ನಮಗೆ ತೋರಿಸಿರುವುದಿಲ್ಲ. ಕಟ್ಟಡಕ್ಕೆ ಉಪಯೋಗಿಸಲಾದ ಕಲ್ಲುಗಳನ್ನು ಹೊರತೆಗೆಯಲಾಗಿತ್ತು ಎಂಬ ಬಗ್ಗೆ ಇದೇ ಮೊದಲ ಭಾರಿಗೆ ನ್ಯಾ.ದ ಮುಂದೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಸುಮಾರು 5-6 ಜನ ಕಾರ್ಮಿಕರು ಕೆಲಸ ಮಾಡುತ್ತಿದ್ದರು, ಕಾರ್ಮಿಕರು ಗಣಿಗಾರಿಕೆ ಮಾಡುತ್ತಿದ್ದ ಬಗ್ಗೆ ಸ್ಥಳದಿಂದ ಓಡಿಹೋದ ಬಗ್ಗೆ, ಅವರನ್ನು ಹಿಡಿಯಲು ಪ್ರಯತ್ನಪಟ್ಟ ಬಗ್ಗೆ ನನ್ನ ಹೇಳಿಕೆಯಲ್ಲಿ ಹೇಳಿರುತ್ತೇನೆ, ಮಹಜರ್ ನಲ್ಲಿ ನಮೂದು ಮಾಡಿರುವುದಿಲ್ಲ. ಈ ಮೇಲ್ಕಂಡ ಸಂಗತಿಗಳನ್ನು ಇದೇ ಮೊದಲ ಭಾರಿಗೆ ನ್ಯಾ.ದ ಮುಂದೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಸ್ಥಳಕ್ಕೆ ಇಲಾಖಾ ವಾಹನದಲ್ಲಿ ಹೋದ ಬಗ್ಗೆ ಮಹಜರ್ ನಲ್ಲಿ ನಮೂದು ಮಾಡಿರುವುದಿಲ್ಲ.

ಮಹಜರ್ ಕಾಲದಲ್ಲಿ ಸದರಿ ಅಕ್ರಮ ಗಣಿಗಾರಿಕೆ ಮಾಡಲಾಗಿತ್ತು ಎನ್ನಲಾದ ಪ್ರದೇಶದಲ್ಲಿ ಎಷ್ಟು ಪ್ರಮಾಣದ ಗಣಿ ಹೊರತೆಗೆಯಲಾಗಿತ್ತು ಎಂದು ಮಹಜರ್ ನಲ್ಲಿ ನಮೂದಿಸಿರುವುದಿಲ್ಲ. ಸದರಿ ಸರ್ವೆ ನಂಬರ್ ಗಳ ಪೈಕಿ ಕಟ್ಟಡ ಕಾಮಗಾರಿಗೆ ಸಂಬಂಧಿಸಿದಂತೆ ಹೊರತೆಗೆಯಲಾದ ಕಲ್ಲುಗಳ ಬಗ್ಗೆ ಲಾಟ್ ಗಳಿದ್ದ ಬಗ್ಗೆ ಉಲ್ಲೇಖ ಇರುವುದಿಲ್ಲ, ಸುಮಾರು 50-100 ಕಲ್ಲುಗಳು ಇದ್ದುದ್ದು ಕಂಡು ಬಂದಿತ್ತು. ಮಹಜರ್ ನಲ್ಲಿ 50-100 ಕಲ್ಲುಗಳು ಇದ್ದ ಬಗ್ಗೆ ವಿವರಿಸಿರುವುದಿಲ್ಲ. ಸ್ಥಳದಲ್ಲಿ ಯಾವುದೇ ಅತ್ಯಾಧುನಿಕ ಯಂತ್ರೋಪಕರಣಗಳು ಇರಲಿಲ್ಲ. ಸ್ಥಳದಲ್ಲಿ ಯಾವುದೇ ಸುತ್ತಿಗೆ, ಹುಳಿ ಇರಲಿಲ್ಲ ಕೆಲಸ ಮಾಡುತ್ತಿದ್ದ ಕಾರ್ಮಿಕರು ತೆಗೆದುಕೊಂಡು ಓಡಿಹೋಗಿರುತ್ತಾರೆ. ನಾವು ಸ್ಥಳಕ್ಕೆ ಹೋಗಿರುವುದಿಲ್ಲ, ಚಾ ಸಾ 1 ಮತ್ತು 2 ರವರು ಕಛೇರಿಯಲ್ಲಿ ತಯಾರಿಸಿದ ದಾಖಲೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ:

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಶ್ರೀರಂಗಪಟ್ಟಣ